# ಬಸವನ ಬಾಗೇವಾಡಿ ತಾಲ್ಲೂಕಿನ ದಲಿತ ಚಳುವಳಿ: ಒಂದು ಅವಲೋಕನ.

**ಯಮನಪ್ಪ ಹುಸನಪ್ಪ ಅಂಗಡಗೇರಿ[1] & ಎಂ.ಎನ್.ಬೆನ್ನೂರ[2]**

[1]ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

[2]ಮುಖ್ಯಸ್ಥರು, ಇತಿಹಾಸ ವಿಭಾಗ, ಎಸ್.ಟಿ.ಸಿ. ಕಾಲೇಜ್, ಬನಹಟ್ಟಿ.

DOI: https://doi.org/10.5281/zenodo.17013765

## ABSTRACT:

ಚಳುವಳಿಗಳು ನೊಂದವರ ಬದುಕನ್ನು ಕಟ್ಟಿಕೊಡುವ ಸಾಧನಗಳಾಗಿವೆ, ಶೋಷಣೆ, ದಬ್ಬಾಳಿಕೆ, ಭೂ ಒಡೆತನ ಹಾಗೂ ಮೂಲಭೂತ ಸೌಲಭ್ಯಗಳ ಈಡೇರಿಕೆಗಾಗಿ ಮತ್ತು ಸಂವಿಧಾನದ ಆಶಯದಂತೆ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಅವಕಾಶಗಳ ಸಮಾನತೆಗಾಗಿ, ಮೂಢನಂಬಿಕೆ, ಕಂದಾಚಾರ, ಅನಿಷ್ಟ ಪದ್ಧತಿ ಆಚರಣೆಯ ವಿರುದ್ಧವಾಗಿ ದಮನಿತರು ತಮ್ಮ ಹಕ್ಕುಗಳನ್ನು ಪಡೆಯುವುದಕ್ಕಾಗಿ, ದಲಿತ ಸಂಘಟನೆಗಳು ನೊಂದವರ, ನಿರಾಶ್ರಿತರ, ನಿರ್ಗತಿಕರ ಏಳಿಗೆಗಾಗಿ ನಡೆದ ಹೋರಾಟಗಳನ್ನು ನಾವು ನೆನೆಯಲೇಬೇಕು.

## KEYWORDS:

ಅಸ್ಪೃಶ್ಯತೆ, ಹೋರಾಟಗಳು, ದೌರ್ಜನ್ಯ, ಸತ್ಯಾಗ್ರಹ, ದಮನಿತ ವರ್ಗ.

## ಪ್ರಸ್ತಾವನೆ:

ವಿಜಯಪುರ ಜಿಲ್ಲೆಯು ಪಂಚ ನದಿಗಳ ನಾಡು, ಸಂತ ಶರಣರ ಪುಣ್ಯಭೂಮಿ, ಸೂಫಿಗಳ ಬೀಡು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ವಿಜಯನಗರದ ಅರಸರು ಹಾಗೂ ಆದಿಲ್ ಶಾಹಿಗಳು, ಮರಾಠರು, ಇತ್ಯಾದಿ ಮನೆತನಗಳ ಗೂಡು. ರೈತನ ಬದುಕಿಗೆ ಆಸರೆಯಾದ ಕಪ್ಪು ಮಣ್ಣಿನ ಪ್ರದೇಶದಲ್ಲಿ ಹಲವಾರು ಹೋರಾಟಗಳು ಜರುಗಿವೆ. ಅದರಲ್ಲಿ ಪ್ರಮುಖವಾಗಿ ದಲಿತರು ತಮ್ಮ ಹಕ್ಕಿಗಾಗಿ ಹಲವಾರು ಚಳುವಳಿಗಳನ್ನೇ ಮಾಡಿದ್ದಾರೆ. ಆ ಪ್ರದೇಶಗಳೆಂದರೆ ಬಸವನ ಬಾಗೇವಾಡಿ, ಇಂಡಿ, ಸಿಂದಗಿ, ಮುದ್ದೇಬಿಹಾಳ, ವಿಜಯಪುರ, ತಾಳಿಕೋಟೆ ಸೇರಿದಂತೆ ಅಲ್ಲಿನ ದಲಿತ ಜನಾಂಗ ತಮ್ಮ ಬದುಕಿಗಾಗಿ ಹೋರಾಟಗಳು ಹಾಗೂ ಚಳುವಳಿಗಳು ಜರುಗಿದವು. ಅವುಗಳ ಕುರಿತು ಅಧ್ಯಯನ ಮಾಡುವುದೇ ನಮ್ಮ ಮುಖ್ಯ ಉದ್ದೇಶ.

ವಿಜಯಪುರ ಜಿಲ್ಲೆಯ ಜನರ ದೃಷ್ಟಿಕೋನ ನಮ್ಮ ಸಂವಿಧಾನದ

ಆಶಯದಂತೆ, ಜಿಲ್ಲೆಯ ಜನತೆ ಯಾವುದೇ ತಾರತಮ್ಯ ಇಲ್ಲದೆ, ಲಿಂಗ, ಜಾತಿ, ಜನಾಂಗ, ಧರ್ಮವನ್ನು ತಿರಸ್ಕರಿಸಿ ಸಾಮರಸ್ಯದಿಂದ ಬದುಕುವುದು ನಮ್ಮೆಲ್ಲರ ಕರ್ತವ್ಯ. ಆದರೆ, ವಿಜಯಪುರ ಜಿಲ್ಲೆಯಲ್ಲಿ ಅಲ್ಲಲ್ಲಿ ಜಾತೀಯತೆ, ದೌರ್ಜನ್ಯ, ಕೊಲೆ ಹಾಗೂ ಹಿಂಸೆ, ಅತ್ಯಾಚಾರಗಳು ನಿರಂತರವಾಗಿ ಜರುಗುವುದರಿಂದ ಅವುಗಳ ವಿರುದ್ಧ ದಲಿತ ಸಂಘಟನೆ ಹಾಗೂ ಇತರ ಸಂಘಟನೆಗಳ ಮೂಲಕ ಧರಣಿ, ಪ್ರತಿಭಟನೆ, ಸತ್ಯಾಗ್ರಹ, ಮುತ್ತಿಗೆ ಹಾಕಿ ಪ್ರತಿಭಟಿಸುವುದರ ಮೂಲಕ ನ್ಯಾಯಪರ ಹಾಗೂ ಹಕ್ಕಿಗಾಗಿ ಹೋರಾಟಗಳು, ಚಳುವಳಿಗಳು ನಡೆಯುತ್ತಲೇ ಇವೆ.

**ದಲಿತ ಚಳುವಳಿಯ ಉದ್ದೇಶ:**

» ದಮನಿತರ ಧ್ವನಿಯಾಗಿ ಹೋರಾಟಗಳ ಮೂಲಕ ನ್ಯಾಯ ಪಡೆಯುವುದು.

» ಭೂಮಿ, ಶಿಕ್ಷಣ ಹಾಗೂ ಸೌಲಭ್ಯಗಳಿಗಾಗಿ ಹಕ್ಕೊತ್ತಾಯ ಮಾಡುವುದು.

» ಅಸ್ಪೃಶ್ಯತೆ ಆಚರಣೆ ವಿರುದ್ಧ ಹೋರಾಟ ಹಮ್ಮಿಕೊಳ್ಳುವುದು.

» ಸಾರ್ವಜನಿಕ ಸ್ಥಳಗಳಾದ ಹೋಟೆಲ್, ದೇವಸ್ಥಾನ, ಗುಡಿ, ಗುಂಡಾರ ಪ್ರವೇಶಕ್ಕಾಗಿ ಹೋರಾಟ ಹಮ್ಮಿಕೊಳ್ಳುವುದು.

» ಮಹಿಳೆಯರ ರಕ್ಷಣೆ, ಉದ್ಯೋಗ ಕಲ್ಪಿಸಲು ಚಳುವಳಿ ಹಾಗೂ ಪ್ರತಿಭಟನೆ ಮಾಡುವುದು.

» ದಲಿತ ಕೇರಿಯಲ್ಲಿ ರಸ್ತೆ, ಶೌಚಾಲಯ, ಕುಡಿಯುವ ನೀರು ಹಾಗೂ ವಿದ್ಯುತ್ ದೀಪಗಳ ಅಳವಡಿಕೆಗಾಗಿ ಧರಣಿ ಹಮ್ಮಿಕೊಳ್ಳುವುದು.

» ದೇವದಾಸಿ ಪದ್ಧತಿ, ಜೀತ ಪದ್ಧತಿ ನಿರ್ಮೂಲನೆ ಹಾಗೂ ಬಾಲಕಾರ್ಮಿಕರ ಪದ್ಧತಿಗಳ ವಿರುದ್ಧ ಪ್ರತಿಭಟಿಸುವುದು.

» ಸ್ಮಶಾನ ಭೂಮಿ, ಅಂಗನವಾಡಿ ಕೇಂದ್ರದಲ್ಲಿ ಉದ್ಯೋಗ ಪಡೆಯಲು ಹಾಗೂ ಸರ್ಕಾರದ ಸೌಲಭ್ಯಗಳನ್ನು ದಕ್ಕಿಸಿಕೊಳ್ಳಲು ಸತ್ಯಾಗ್ರಹ ಮಾಡುವುದು.

» ಶಿಷ್ಯವೇತನ ಹಾಗೂ ವಸತಿ ನಿಲಯಗಳ ಪ್ರವೇಶಕ್ಕಾಗಿ ಹೋರಾಟಗಳು ಇತ್ಯಾದಿ.

## ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ನಡೆದ ಘಟನೆ ಪ್ರಮುಖ ಸ್ಥಳಗಳು

| ಕ್ರ.ಸಂ. | ತಾಲ್ಲೂಕು | ಘಟನೆ ಜರಗಿದ ಪ್ರಕರಣಗಳು |
|---|---|---|
| 1 | ಸಾಸನೂರ | ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಬರುವ ಸಾಸನೂರ ಗ್ರಾಮದಲ್ಲಿ ದಲಿತ ಜನಾಂಗ, ರೆಡ್ಡಿ, ಪಂಚಮಶಾಲಿ, ಲಿಂಗಾಯತರು ಹಾಗೂ ಇತರ ಸಮುದಾಯದ ಜನ ಈ ಗ್ರಾಮದಲ್ಲಿ ವಾಸ ಮಾಡುತ್ತಾರೆ. ರೆಡ್ಡಿ ಜನಾಂಗವೇ ಅಧಿಕ ಸಂಖ್ಯೆಯಲ್ಲಿದೆ. |
| 2 | ನರಸಲಗಿ | ನರಸಲಗಿ ಗ್ರಾಮವು ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಇದೆ. ಈ ಗ್ರಾಮದಲ್ಲಿ ದಲಿತರು, ಕುರುಬರು, ಪಂಚಮಸಾಲಿ ಲಿಂಗಾಯತರು, ಒಕ್ಕಲಿಗ, ಮರಾಠರು, ಪರಿಶಿಷ್ಟ ಪಂಗಡದವರು ಹಾಗೂ ಮುಸ್ಲಿಮರು, ಪತ್ತಾರರು ವಾಸ ಇದ್ದರೂ ರೆಡ್ಡಿ ಜನಾಂಗವೇ ಅಧಿಕ ಸಂಖ್ಯೆಯಲ್ಲಿದ್ದಾರೆ. |
| 3 | ನಾಗೂರ | ನಾಗೂರ ಗ್ರಾಮ ಬಸವನಬಾಗೇವಾಡಿ ಪಟ್ಟಣದಿಂದ ಕೇವಲ ಮೂರು ಕಿಲೋಮೀಟರ್ ಅಂತರದಲ್ಲಿರುವ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಪಂಚಮಸಾಲಿಗಳು, ಕುರುಬರು, ದಲಿತರು (ಚಲವಾದಿ, ಮಾದಿಗ, ಕೊರವ, ವಡ್ಡರ ಹಾಗೂ ಲಂಬಾಣಿ), ಜಂಗಮರು ಮತ್ತು ಮುಸಲ್ಮಾನರು ಇದ್ದಾರೆ. ಈ ಗ್ರಾಮದಲ್ಲಿ ಪಂಚಮಸಾಲಿ ಹಾಗೂ ಕುರುಬ ಸಮುದಾಯದ ಜನ ಅಧಿಕ ಸಂಖ್ಯೆಯಲ್ಲಿ ಇದ್ದಾರೆ. |
| 4 | ಕಡಕೋಳ | ಬಸವನಬಾಗೇವಾಡಿ ತಾಲ್ಲೂಕಿನ ಡೋಣಿ ನದಿ ಪ್ರದೇಶದ ವ್ಯಾಪ್ತಿಗೆ ಸೇರಿದ ಕಡಕೋಳ ಗ್ರಾಮದಲ್ಲಿ, ರೆಡ್ಡಿ ಜನಾಂಗ, ಪಂಚಮಶಾಲಿ ಲಿಂಗಾಯತರು, ಕುರುಬರು, ಮುಸಲ್ಮಾನರು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಜನಾಂಗ ಮತ್ತು ಜಂಗಮ ಸಮಾಜದ ಜನರು ವಾಸವಿದ್ದರೂ ರೆಡ್ಡಿ ಜನಾಂಗದ ಜನಸಂಖ್ಯೆಯೇ ಅಧಿಕವಾಗಿದೆ. |

**ಸಾಸನೂರ ಗ್ರಾಮ:**

ಸಾಸನೂರ ಗ್ರಾಮ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಸಾಸನೂರ ಗ್ರಾಮದಲ್ಲಿ ದಿನಾಂಕ 22.8.1946 ರಂದು ವಿವಿಧ ಕಾರಣಗಳಿಂದ ಪರಿಶಿಷ್ಟ ಜಾತಿಗೆ ಸೇರಿದ ಚಲವಾದಿ (ಹೊಲೆಯ) ಜನಾಂಗದ ಮೇಲೆ ಸವರ್ಣೀಯರಿಂದ ದೌರ್ಜನ್ಯ ಜರುಗಿತು. ಆ ದೌರ್ಜನ್ಯದಲ್ಲಿ 13 ಜನರನ್ನು ಕಡಿದು ಕೊಂದರು. ಒಬ್ಬ ವ್ಯಕ್ತಿ ತಪ್ಪಿಸಿಕೊಂಡು ಓಡಿಹೋಗುತ್ತಾನೆ. ಈ ಘಟನೆಯನ್ನು ಕಣ್ಣಾರೆ

ಕಂಡ ದಲಿತ ಕೇರಿಯ ಜನರು ಊರು ಬಿಟ್ಟು ಬೇರೆ ಊರಿನಲ್ಲಿ ನೆಲೆಸಿದರು. ಆದರೆ, ಇಲ್ಲಿ ಸವರ್ಣೀಯರು ದಲಿತರ ಇನ್ನೊಂದು ಜನಾಂಗವಾದ ಮಾದಿಗರನ್ನು ದಬ್ಬಾಳಿಕೆಯಿಂದ ತಮ್ಮತ್ತ ಸೆಳೆದುಕೊಂಡು ಕೊಲೆಯ ಕಟ್ಟುಕಥೆಯನ್ನು ಮಾದಿಗರ ಮೇಲೆ ಹಾಕಿ ಅವರನ್ನು ಜೈಲು ಶಿಕ್ಷೆಗೆ ದೂಡಿದರು. ದೌರ್ಜನ್ಯ ಮಾಡದ ವ್ಯಕ್ತಿಗಳು ಶಿಕ್ಷೆಗೆ ಗುರಿಯಾದರು, ದೌರ್ಜನ್ಯ ಎಸಗಿದ ಮೇಲ್ಜಾತಿಯವರು ನಿರಪರಾಧಿಗಳೆಂದು ಪರಿಗಣಿಸಲ್ಪಟ್ಟರು. ಅಸ್ಪೃಶ್ಯತೆಯ ಕರಾಳ ಮುಖವಾಡ ಕಳಚಲು ಡಾ. ಬಿ.ಆರ್. ಅಂಬೇಡ್ಕರ್ ಅವರು ಈ ಘಟನೆಯ ಸಲುವಾಗಿ 22.10.1946 ರಂದು ಬಸವನಬಾಗೇವಾಡಿ ಪೊಲೀಸ್ ಠಾಣೆಗೆ ಭೇಟಿ ನೀಡಿದ ದಾಖಲೆಗಳು ಬಸವನಬಾಗೇವಾಡಿ ಪೊಲೀಸ್ ಠಾಣೆಯ ಬೀಟ್ ಡೈರಿಯಲ್ಲಿ ದಾಖಲು ಇರುತ್ತದೆ.

**ಕಡಕೋಳ ಗ್ರಾಮ:**

ಕಡಕೋಳ ಗ್ರಾಮ ಬಸವನಬಾಗೇವಾಡಿ ತಾಲ್ಲೂಕಿನ ಕಡಕೋಳ ಗ್ರಾಮದಲ್ಲಿ 2005ರಲ್ಲಿ ಸಾಮಾಜಿಕ ಬಹಿಷ್ಕಾರದಂತಹ ಅನಿಷ್ಟ ಪದ್ಧತಿ ಬೆಳಕಿಗೆ ಬಂದಿದೆ. ಊರು ಮುಂದಿರುವ ಕೆರೆ ನೀರನ್ನು ದಲಿತರು ಮುಟ್ಟಿದ್ದಾರೆ ಎಂದು ಮೇಲ್ಜಾತಿಯವರು ಸಾಮೂಹಿಕವಾಗಿ ಬಹಿಷ್ಕಾರ ಹಾಕಿದರು ಹಾಗೂ ಕೆರೆ ನೀರು ಮುಟ್ಟಲು ಕಾರಣರಾದ ತಾಯಪ್ಪ ಎಂಬಾತನಿಗೆ ಚಪ್ಪಲಿಯಿಂದ ಹೊಡೆದು ನಿಂದಿಸುತ್ತಾರೆ. ಆತನು ಈ ನಿಂದನೆಯ ವಿರುದ್ಧವಾಗಿ ಸವರ್ಣೀಯರ ಮುಖಂಡನ ಮೇಲೆ ದೌರ್ಜನ್ಯ ವಿರೋಧಿ ಪ್ರಕರಣ ದಾಖಲಿಸುತ್ತಾನೆ. ಇದರಿಂದ ಕೋಪಗೊಂಡ ಸವರ್ಣೀಯರು ದಲಿತರಿಗೆ, ಕಿರಾಣಿ ಅಂಗಡಿ ಸುಟ್ಟು ಹಾಕುವುದು, ಹೊಲಗಳಲ್ಲಿ ಕೂಲಿ ಕೆಲಸ ನೀಡದಿರುವುದು ಹೀಗೆ ದಲಿತ ಕುಟುಂಬಗಳ ಉಪಜೀವನಕ್ಕೆ ಆಧಾರವಿಲ್ಲದೆ ಜಿಲ್ಲಾಧಿಕಾರಿಗಳ ಕಚೇರಿಯವರೆಗೂ ಪಾದಯಾತ್ರೆ ಹಮ್ಮಿಕೊಂಡರು. ಈ ಘಟನೆಯ ಕುರಿತು ಜಿಲ್ಲಾ ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ಹಾಗೂ ಪೊಲೀಸ್ ಇಲಾಖೆ ಜಂಟಿಯಾಗಿ ಕಡಕೋಳ ಗ್ರಾಮದಲ್ಲಿ ಶಾಂತಿ ಸಭೆ ಏರ್ಪಡಿಸಿ ದಲಿತರು ಹಾಗೂ ಸವರ್ಣೀಯರ ಮಧ್ಯೆ ಇರುವ ಭೇದಭಾವನೆಯನ್ನು ತಿಳಿಗೊಳಿಸಿ ಒಡೆದ ಎರಡು ಮನಸ್ಸುಗಳನ್ನು ಒಂದುಗೂಡಿಸಿದರು.

**ನರಸಲಗಿ ಗ್ರಾಮ:**

ನರಸಲಗಿ ಗ್ರಾಮ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ನರಸಲಗಿ ಗ್ರಾಮದಲ್ಲಿ ಅಸ್ಪೃಶ್ಯತೆ ಆಚರಣೆ ಜೀವಂತವಾಗಿದ್ದನ್ನು ಪ್ರಶ್ನೆ ಮಾಡಿದ್ದಕ್ಕಾಗಿ ಹಾಗೂ ಸಮಾನತೆ ನೀಡಬೇಕೆಂಬ ಉದ್ದೇಶದಿಂದ, ಯುವ ಹೋರಾಟಗಾರರು ಹಾಗೂ ದಲಿತ ಮುಖಂಡರಾದ ಅಭಿಷೇಕ್ ಚಕ್ರವರ್ತಿ ಅವರು 1987–88ರಲ್ಲಿ, ತಮ್ಮ ನರಸಲಗಿ ಗ್ರಾಮದಲ್ಲಿ ಸಾಮೂಹಿಕ ಬಹಿಷ್ಕಾರ ಹಾಕಿದ್ದನ್ನು ವಿರೋಧಿಸಿ ನಾಲ್ಕು

ಐದು ಜನ ದಲಿತ ಯುವಕರನ್ನು ಕರೆದುಕೊಂಡು ಬಿಜಾಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಬಳಿ ನ್ಯಾಯ ಹೇಳಲು ಹೋದರು. ಆಗ ಜೀವನ್ ಗಾಂವ್ಕರ್ ಎಂಬ ಪೊಲೀಸ ವರಿಷ್ಠಾಧಿಕಾರಿಯವರು ಅವಾಚ್ಯ ಶಬ್ದಗಳಿಂದ ನಿಂದಿಸಿ ಅಪಮಾನಗೊಳಿಸಿದ್ದಕ್ಕಾಗಿ ದಲಿತ ಮುಖಂಡರು ಹಾಗೂ ಅಧಿಕಾರಿಗಳ ಮಧ್ಯೆ ವಾಗ್ವಾದ ನಡೆಯಿತು. ಆ ಘಟನೆ ಕುರಿತು ಬಿಜಾಪುರ ಜಿಲ್ಲಾ ಪ್ರಜಾವಾಣಿ ವರದಿಗಾರರಾದ ರಾಮರಾವ್ ಅವರು ವ್ಯಂಗ್ಯಚಿತ್ರ ಮಾಡಿ ಮುಖಪುಟದಲ್ಲಿ ಸುದ್ದಿ ಮಾಡಿದರು. ಈ ಸುದ್ದಿ ಕಾಡ್ಗಿಚ್ಚಿನಂತೆ ಹರಡಿದಾಗ ಅಂದಿನ ಸಮಾಜ ಕಲ್ಯಾಣ ಸಚಿವರಾದ ಬಿ. ಬಸಲಿಂಗಪ್ಪನವರು, ವಿಜಯಪುರ (ಬಿಜಾಪುರ) ಜಿಲ್ಲಾಧಿಕಾರಿ ಅಜಿತ್ ಶೆಟ್ಟಿ ಅವರು ನರಸಲಗಿ ಗ್ರಾಮಕ್ಕೆ ಭೇಟಿ ನೀಡಿದರು. ತದನಂತರ ವಿಧಾನಸೌಧದಲ್ಲಿ ವಿಜಯಪುರ (ಬಿಜಾಪುರ) ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ನರಸಲಗಿ ಗ್ರಾಮದಲ್ಲಿ ದಲಿತರಿಗೆ ಸಾಮಾಜಿಕ ಬಹಿಷ್ಕಾರದ ವಿಷಯವಾಗಿ ಕೋಲಾಹಲ ಉಂಟಾಯಿತು. ರಮೇಶ್ ಜಿಗಜಿಣಗಿ, ಜೆ.ಎಚ್. ಬಾಗಲಕೋಟೆ, ಮಲ್ಲಿಕಾರ್ಜುನ ಖರ್ಗೆ ಅವರು ನರಸಲಗಿ ಗ್ರಾಮಕ್ಕೆ ಭೇಟಿ ನೀಡಿದರು. ಆಗಿನ ವಿರೋಧ ಪಕ್ಷದ ನಾಯಕರಾದ ಜೆ.ಎನ್. ನರಸಿಂಹಮೂರ್ತಿ ಈ ಘಟನೆಯ ಕುರಿತು ವಿಧಾನ ಸೌಧದಲ್ಲಿ ಧ್ವನಿ ಎತ್ತಿದರು. ಸುಮಾರು ಮೂರ್ನಾಲ್ಕು ತಿಂಗಳುಗಳ ಕಾಲ ಘಟನೆ ಜರುಗಿ ನೊಂದ ದಲಿತ ಜನಾಂಗಕ್ಕೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಒದಗಿಸಲಾಯಿತು. ತದನಂತರ ಈ ಹೋರಾಟದ ಕಿಚ್ಚು ಅವಿಭಜಿತ ಬಿಜಾಪುರ ಜಿಲ್ಲೆಗೆ ವ್ಯಾಪಿಸಿತ್ತು. ಆಗ ಹಲವಾರು ಸಭೆ, ಸಮ್ಮೇಳನಗಳು ಜರುಗಿದವು. ವಿಜಯಪುರ (ಬಿಜಾಪುರ) ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ವಸತಿ ನಿಲಯಗಳ ಸಮಸ್ಯೆ ಉಂಟಾಯಿತು. ಅದನ್ನು ಪರಿಹರಿಸುವಲ್ಲಿ ದಲಿತ ಚಳುವಳಿಗಳು ಯಶಸ್ವಿಯಾಯಿತು.

**ನಾಗೂರ ಗ್ರಾಮ:**

ನಾಗೂರ ಗ್ರಾಮ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ನಾಗೂರ ಗ್ರಾಮದಲ್ಲಿ ಸಾಮೂಹಿಕ ಬಹಿಷ್ಕಾರ ಹಾಗೂ ಅಸ್ಪೃಶ್ಯತೆ ಆಚರಣೆ ಇನ್ನೂ ಜೀವಂತವಾಗಿದೆ. ಬಸವನಬಾಗೇವಾಡಿ ಪಟ್ಟಣದಿಂದ ಕೇವಲ 4 ಕಿ.ಮೀ. ಅಂತರದಲ್ಲಿರುವ ನಾಗೂರ ಗ್ರಾಮದಲ್ಲಿ ಸವರ್ಣೀಯರಿಂದ ಅಸ್ಪೃಶ್ಯತೆ ಆಚರಣೆ ಜೀವಂತವಾಗಿದೆ. ದಿನಾಂಕ 26.03.2024 ರಂದು ಪರಿಶಿಷ್ಟ ಜಾತಿಗೆ ಸೇರಿದ ಸಿದ್ರಾಮಪ್ಪ ಚಂದಪ್ಪ ಅಂಗಡಗೇರಿ ಎಂಬ ವ್ಯಕ್ತಿ ನಿಧನ ಸುದ್ದಿ ತಿಳಿದು ಸವರ್ಣೀಯರು ಹೋಟೆಲ್ ಬಂದ್ ಮಾಡಿ ತಮ್ಮ ತಮ್ಮ ಮನೆಗೆ ತೆರಳಿದರು. ಅಂತ್ಯಸಂಸ್ಕಾರಕ್ಕೆ ಬಂದ ಸಂಬಂಧಿಗಳು ಚಹಾ ಕುಡಿಯಬೇಕೆಂದು ಊರಿನಲ್ಲಿ ಹೋದಾಗ, ಎಲ್ಲಾ ಹೋಟೆಲ್‌ಗಳಿಗೆ ಬೀಗ ಹಾಕಲಾಗಿತ್ತು. ವಿಚಾರಿಸಿದಾಗ, ದಲಿತ ಜನಾಂಗದ

ಯಾವುದೇ ವ್ಯಕ್ತಿಗಳು ಈ ಗ್ರಾಮದಲ್ಲಿ ಮರಣ ಹೊಂದಿದ ಸಮಯದಲ್ಲಿ ಅಂಗಡಿ ಬಂದ್ ಮಾಡುವ ವಾಡಿಕೆ ರೂಢಿಗತವಾಗಿದೆ ಎಂಬ ವಿಷಯ ಗೊತ್ತಾಯಿತು. ಆಗ ದಲಿತ ಸಂಘರ್ಷ ಸಮಿತಿಯ ವಿವಿಧ ಬಣಗಳ ಮುಖಂಡರು ನಾಗೂರ ಗ್ರಾಮಕ್ಕೆ ಆಗಮಿಸಿ, ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಸಮ್ಮುಖದಲ್ಲಿ ಅಂಗಡಿ ಬಂದ್ ಮಾಡಿದ ದೃಶ್ಯವನ್ನು ತೋರಿಸಿ, ಸ್ವಯಂ ಪ್ರೇರಿತವಾಗಿ ಹೋಟೆಲ್ ಮಾಲೀಕರ ಮೇಲೆ ಕೇಸ್ ದಾಖಲಿಸಿ ಎಂದು ಕೇಳಿಕೊಂಡಾಗ, ರಾಜಕೀಯ ಒತ್ತಡದಿಂದ ಅಧಿಕಾರಿಯ ವರ್ಗ ಮೌನಕ್ಕೆ ಶರಣಾಯಿತು. ಶವಸಂಸ್ಕಾರದ ನಂತರ ಬಸವನಬಾಗೇವಾಡಿ ಪೊಲೀಸ್ ಠಾಣೆಗೆ ನಾಗೂರ ಗ್ರಾಮದ ದಲಿತ ವ್ಯಕ್ತಿಗಳು ಆಗಮಿಸಿ, ಅಸ್ಪೃಶ್ಯತೆ ಆಚರಣೆಗೆ ಸಂಬಂಧಿಸಿದಂತೆ ಸವರ್ಣೀಯ ನಾಲ್ಕು ಜನಗಳ ಮೇಲೆ ಕೇಸ್ ದಾಖಲು ಮಾಡುತ್ತಾರೆ. ಮರುದಿನ ಊರಿನ ಸವರ್ಣೀಯರೆಲ್ಲರೂ ಕೂಡಿಕೊಂಡು ಪೊಲೀಸ್ ಠಾಣೆಗೆ ಆಗಮಿಸಿ ಏಳು ಜನ ದಲಿತ ವ್ಯಕ್ತಿಗಳ ಮೇಲೆ ಕೌಂಟರ್ ಕೇಸ್ ದಾಖಲಿಸುತ್ತಾರೆ. ಈ ವಿಷಯ ಅರಿತ ದಲಿತ ಸಂಘಟನೆಗಳು ಡಿಸಿ ಕಚೇರಿ ವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲು ನಿರ್ಧಾರ ತೆಗೆದುಕೊಂಡು ಕರಪತ್ರ ಹಂಚುವ ಕಾರ್ಯ ನಡೆದ ಸಂದರ್ಭದಲ್ಲಿ, ಅಪರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ತಾಲ್ಲೂಕು ದಂಡಾಧಿಕಾರಿಗಳು ಹಾಗೂ ದೌರ್ಜನ್ಯ ಕಮಿಟಿಯ ಸದಸ್ಯರು ಕೂಡಿಕೊಂಡು ನಾಗೂರ ಗ್ರಾಮಕ್ಕೆ ಆಗಮಿಸಿ ಶಾಂತಿ ಸಭೆ ಮಾಡಿ, ಸಾರ್ವಜನಿಕ ಸ್ಥಳಗಳಿಗೆ ಸವರ್ಣೀಯರು ನಿರ್ಬಂಧ ಹೇರಿದರೆ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲು ಆಶ್ವಾಸನೆ ನೀಡಿದರಿಂದ, ರಾಜಿ ಸಂಧಾನದ ಮೂಲಕ ಸಮಸ್ಯೆ ಬಗೆಹರಿದಿದೆ ಎಂದು ಮೇಲ್ನೋಟಕ್ಕೆ ಕಂಡರೂ, ಹಗೆತನ ಇನ್ನೂ ಹಾಗೆಯೇ ಇದೆ.

**ಉಪಸಂಹಾರ:**

ವಿಜಯಪುರ ಜಿಲ್ಲೆಯು ಮಹಾರಾಷ್ಟ್ರ, ಕಲಬುರಗಿ, ಯಾದಗಿರಿ, ರಾಯಚೂರ, ಬಾಗಲಕೋಟೆ ಗಡಿಯನ್ನು ಹೊಂದಿಕೊಂಡಿರುವುದರಿಂದ ವಿವಿಧ ಸಂಸ್ಕೃತಿ, ಪರಂಪರೆ ಹಾಗೂ ಭಾಷೆಯನ್ನು ಹೊಂದಿರುವ ಅಪರೂಪದ ಜಿಲ್ಲೆಯಾಗಿದೆ. ಪಂಚ ನದಿಗಳ ಬೀಡಾದ ಈ ಜಿಲ್ಲೆಯಲ್ಲಿ ಸಾಮಾಜಿಕ ಸಾಮರಸ್ಯಕ್ಕಾಗಿ, ಭೂಮಿಯ ಹಕ್ಕಿಗಾಗಿ, ಶಿಕ್ಷಣಕ್ಕಾಗಿ, ಉದ್ಯೋಗ ಮತ್ತು ಅನಿಷ್ಟ ಪದ್ಧತಿಗಳ ವಿರುದ್ಧ ದಲಿತ ಸಂಘಟನೆ ಹಾಗೂ ಇತರ ಸಂಘಟನೆಗಳ ಮೂಲಕ ಹೋರಾಟ, ಧರಣಿ, ಪ್ರತಿಭಟನೆ, ಸತ್ಯಾಗ್ರಹ ನಿರಂತರವಾಗಿ ಜಿಲ್ಲೆಯಲ್ಲಿ ನಡೆಯುತ್ತಿರುತ್ತವೆ.

**ಪರಾಮರ್ಶನ ಗ್ರಂಥಗಳು:**


1. ಚಿನ್ನಸ್ವಾಮಿ ಸೋಸಲೆ ಎನ್., (2018), ದಲಿತರ ಬದುಕು ಮೆಲುಕು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಚಿನ್ನಸ್ವಾಮಿ ಸೊಸಲೆ ಎನ್., (2014), ದಲಿತರ ಮೇಲೆ ದೌರ್ಜನ್ಯ: ಒಂದು ನೋಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.